**ಪ್ರಾಸಾ-1, ಶೈಲಾ ಹೆಬ್ಬಾಳ ರವರನ್ನು ದಿನಾಂಕಃ 17.07.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಶ್ರೀ ಎಂ.ಎಸ್. ದೊಡ್ಡಗೌಡರ, ಆರೋಪಿತರ ಪರ ವಕೀಲರಿಂದಃ**

18. ನಾನು ಬಿಎ ಡಿಗ್ರೀವರೆಗೂ ಓದಿದ್ದೇನೆ. ನಮ್ಮ ಅಜ್ಜನ ಹೆಸರಿಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಆಸ್ತಿ ಬಿಟ್ಟು, 5 ಎಕರೆ ಹೊಲ, ನಾವು ವಾಸ ಮಾಡುವ ಮನೆ ಇರುತ್ತವೆ. ನಮ್ಮ ಮನೆಯು ಊರ ಮಧ್ಯದಲ್ಲಿ ಇದೆ ಎಂದರೆ ಸರಿ. ವ್ಯಾಜ್ಯ ಸ್ವತ್ತು ಮತ್ತು ನಮ್ಮ ಮನೆಗೂ ಅಂತರ ಸುಮಾರು 100 ಮೀಟರ ಇರುತ್ತದೆ. ನಮ್ಮ ಮನೆಯಿಂದ ವ್ಯಾಜ್ಯ ಸ್ವತ್ತಿಗೆ ನಡೆದುಕೊಂಡು ಹೋದರೆ 2 ನಿಮಿಷ ಸಮಯ ಹಿಡಿಯುತ್ತದೆ. ನಮ್ಮ ಹತ್ತಿರ ಎತ್ತುಗಳು ಮತ್ತು ಹಸುಗಳು ಇರುವುದಿಲ್ಲ.

19. ಘಟನೆ ಆಯಿತು ಎನ್ನಲಾದ ದಿನ ಶುಕ್ರವಾರ ಆಗಿತ್ತು. ಸರ್ವೆ ನಂ. 175 - ವ್ಯಾಜ್ಯ ಸ್ವತ್ತಿನ ಪಕ್ಕದಲ್ಲಿ ಆರೋಪಿಗಳ ಸ್ವತ್ತು ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 175 ರ ದಕ್ಷಿಣಕ್ಕೆ ಆಸ್ತಿ ನಂ. 190 ಇದ್ದು, ಅದು ನಾಗ ಭೂಷಣ ಮಠಕ್ಕೆ ಸಂಬಂಧಿಸಿದೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಮಠ ಇದ್ದರೂ ಸಹ ಮಠ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಾಗ ಭೂಷಣ ಮಠಕ್ಕೆ ಆರೋಪಿಗಳು ಅರ್ಚಕರಿದ್ದಾರೆ ಮತ್ತು ಅದು ಮುಜರಾಯಿ ಇಲಾಖೆಗೆ ಸಂಬಂಧಿಸಿದೆ ಎಂದರೆ ಸರಿ.

20. ನಮ್ಮ ಸರ್ವೆ ನಂ. 175 ಆಸ್ತಿಯನ್ನು ಮಠಗೆ ಸಂಬಂಧಿಸಿದ ಆಸ್ತಿಗೆ ಒತ್ತುವರಿ ಮಾಡಿ ವಿಸ್ತರಿಸುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ಮಠದ ಆಸ್ತಿಯನ್ನು ನಾವು ಒತ್ತುವರಿ ಮಾಡಿದ್ದರಿಂದ,ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನಮಗೂ ಅವರಿಗೂ ದ್ವೇಷ ಇದೆ ಎಂದರೆ ಸರಿಯಲ್ಲ. ಆರೋಪಿತರ ಜೊತೆ ನಾನು ಮಾತನಾಡುವುದಿಲ್ಲ ಎಂದರೆ ಸರಿ.

21. ನಾವು ಹಾಗೂ ಆರೋಪಿಗಳು ಒಂದೇ ಜಾತಿಗೆ ಸೇರಿದ್ದೇವೆ ಎಂದರೆ ಸರಿ. ನನ್ನ ಗಂಡನು 2023 ರಿಂದ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೂ ಮೊದಲು ನನ್ನ ಗಂಡ ಅತಿಥಿ ಶಿಕ್ಷಕರಾಗಿ ವಿವಿಧ ಶಾಲೆಗಳಲ್ಲಿ ಕೆಲಸ ಮಾಡಿದ್ದಾರೆ.

22. ಘಟನೆ ನಡೆಯಿತು ಎನ್ನಲಾದ ಮೊದಲೂ ಸಹ ಆರೋಪಿಗಳು ನಮ್ಮ ಮೇಲೆ 2 – 3 ಸಾರಿ ಜಗಳ ಮಾಡಿದ್ದಾರೆ. ಆ ಬಗ್ಗೆ ದೂರನ್ನು ನಾನು ನೀಡಿದ್ದೆನು. ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಒದಗಿಸಿರುವುದಿಲ್ಲ. ಮಠದ ಆಸ್ತಿಯನ್ನು ನಾವು ಒತ್ತುವರಿ ಮಾಡಿದ್ದನ್ನು ಆರೋಪಿಗಳು ತಡೆದಿದ್ದರಿಂದ ನಾನು ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಪ್ರಕಾರ ಆರೋಪಿಗಳು ನನ್ನ ಗಂಡನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ

ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

23. ಆ ದಿನ ಬೆಳಿಗ್ಗೆ 09.00 ಗಂಟೆಗೆ ನನ್ನ ಗಂಡ ಹಾಗೂ ನನ್ನ ಮಾವ ಖಾಲಿ ಜಾಗವನ್ನು ಸ್ವಚ್ಛ ಮಾಡಲು ಹೋಗಿದ್ದರು. ಬೆಳಿಗ್ಗೆ 09.10 ಕ್ಕೆ ಅಲ್ಲಿದ್ದ ಜನರು ಬಂದು ಜಗಳವಾಗುತ್ತಿದೆ ಎಂದು ನನಗೆ ತಿಳಿಸಿದರು. ನಾನು ತಕ್ಷಣ ಸ್ಥಳಕ್ಕೆ ಹೋದೆನು. ಮೂರೂ ಜನ ಆರೋಪಿಗಳ ಕೈಯಲ್ಲಿ ಬಡಿಗೆಗಳು ಇದ್ದವು. ಆರೋಪಿಗಳು ಬಡಿಗೆಯಿಂದ ಹೊಡೆದಿದ್ದಕ್ಕೆ ನನ್ನ ಗಂಡನ ಕಿವಿಯ ಹತ್ತಿರ ಹಾಗೂ ಹಣೆಯ ಮೇಲೆ ರಕ್ತಗಾಯವಾಗಿತ್ತು. ಸದರಿ ರಕ್ತ ಶರ್ಟ ಮೇಲೆ ಬಿದ್ದಿತ್ತು. ಸದರಿ ನನ್ನ ಗಂಡನು ಧರಿಸಿದ್ದ ಶರ್ಟನ್ನು ಪೋಲೀಸರು ವಶಪಡಿಸಿಕೊಂಡಿರುವುದಿಲ್ಲ. 15 ರಿಂದ 20 ನಿಮಿಷಗಳ ವರೆಗೆ ಗಲಾಟೆ ನಡೆದಿರುತ್ತದೆ.

24. ಘಟನೆ ಆದ ನಂತರ ನನ್ನ ಗಂಡ ಮತ್ತು ಮಾವನನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಒಂದು ಖಾಸಗಿ ಕಾರಿನಲ್ಲಿ ಕರೆದುಕೊಂಡು ಬಂದಿರುತ್ತೇವೆ. ಆಗ ನನ್ನ ಗಂಡನಿಗೆ ಪ್ರಜ್ಞೆ ಇರಲಿಲ್ಲ. ಮೊದಲು ಅವರನ್ನು ಬನ್ನಿಕೊಪ್ಪದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಸದರಿ ಕಾರ ನಂಬರ ನನಗೆ ಗೊತ್ತಿಲ್ಲ. ಬನ್ನಿಕೊಪ್ಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಡಾಃ ಸಚಿನ ಇರುತ್ತದೆ. ಬೆಳ್ಳಟ್ಟಿಯಲ್ಲಿ ಹೊರ ಪೋಲೀಸ ಠಾಣೆ ಇದೆ ಎಂದರೆ ಸರಿ. ಅದೇ ದಿನ ದೂರನ್ನು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಗದಗ ಜಿಲ್ಲಾ ಆಸ್ಪತ್ರೆಗೆ ಬಂದಾಗ, ಸಮಯ 11.30/12.00 ಗಂಟೆಯಾಗಿತ್ತು.

25. ದಿಃ 27.03.2022 ರಂದು ನಾನು ದೂರನ್ನು ದಾಖಲಿಸಿರುತ್ತೇನೆ. ನಿಪಿ-1 ರ ದಾಖಲೆಯನ್ನು ನಾನು ಬರೆದಿರುತ್ತೇನೆ. ನಮ್ಮ ಸಂಬಂಧಿಕರಲ್ಲಿ ಒಬ್ಬರು ಪೋಲೀಸ ಆಫೀಸರ ಆಗಿದ್ದಾರೆ ಎಂದರೆ ಸರಿಯಲ್ಲ.

26. ಘಟನೆ ನಡೆಯುವ ಸಮಯದಲ್ಲಿ ನಮ್ಮ ಜಾಗದ ಸುತ್ತಲೂ ತಂತಿ ಬೇಲಿಯನ್ನು ಹಾಕಿಸಲಾಗಿತ್ತು. ಆ ದಿನ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಮತ್ತು ಆರೋಪಿಗಳು ನನ್ನ ಗಂಡ ಹಾಗೂ ಮಾವನ ಮೇಲೆ ಹಲ್ಲೆ ಮಾಡದೇ ಇದ್ದರೂ ಸಹ ಮಠದ ಜಾಗವನ್ನು ಒತ್ತುವರಿ ಮಾಡಿಕೊಳ್ಳುವ ಉದ್ದೇಶದಿಂದ ನಾನು ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಂತಹ ಬಡಿಗೆಗಳು ಎಲ್ಲಾ ಸಿಗುತ್ತವೆ ಎಂದರೆ ಸರಿಯಲ್ಲ.

27. ಹಲ್ಲೆಯಲ್ಲಿ ನನ್ನ ಗಂಡನ ಬಲಗೈ ಮುರಿದಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 175 ಕ್ಕೆ ಸಂಬಂಧಿಸಿದಂತೆ ನಮ್ಮ ಅಜ್ಜ ಮಾಲೀಕ ಎಂದು

ತೋರಿಸಲು ನಾನು ಹಾಜರ ಪಡಿಸಿರುವ ನಿಪಿ-2 ಮತ್ತು 4 ದಾಖಲೆಗಳು ಸೃಷ್ಟಿಸಿದ



ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ-2 ಮತ್ತು 4 ಗಳು ಸರ್ವೆ ನಂ. 175 ಕ್ಕೆ ನನ್ನ ಅಜ್ಜ ಮಾಲೀಕನಾಗಿದ್ದಾನೆ ಎಂದು ತೋರಿಸಲು ಸುಸಂಬದ್ಧ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ.

28. ಆರೋಪಿಗಳು ನನ್ನ ಗಂಡ ಹಾಗೂ ಅಜ್ಜನಿಗೆ ಹೊಡೆಯುತ್ತಿದ್ದಾಗ, ಸುಮಾರು ಜನರು ಸೇರಿದ್ದು, ಅವರ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ಜಾಗವನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**